AKSHARASURYA
E-ISSN: 2583-620X
Peer-Reviewed, Multi Lingual E-Journal
Volume – 02, Issue – 03, March 2023.

# ಬುಡಕಟ್ಟು ಸಾಹಿತ್ಯ ಮತ್ತು ಸಂಸ್ಕೃತಿಯಲ್ಲಿ ಸಸ್ಯಸಂಕುಲ

ವೀರಣ್ಣ ಎಂ. ಡಿ.
ಸಂಶೋಧಕರು
ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ
ಮಾನಸ ಗಂಗೋತ್ರಿ, ಮೈಸೂರು
veerusoliga@gmail.com

*** ಪ್ರಸ್ತುತ ಲೇಖನವನ್ನು ಕ್ಷೇತ್ರಕಾರ್ಯದ ಮಾಹಿತಿಯ ಆಧಾರದ ಮೇಲೆ ಪ್ರಸ್ತುತಪಡಿಸಲಾಗಿದೆ**

ಮಾನವನಲ್ಲಿ ಹುದುಗಿರುವ ಅಂತಃಸತ್ವವು ಸಾಹಿತ್ಯ ಮತ್ತು ಸಂಸ್ಕೃತಿಯ ಉಗಮಕ್ಕೆ ಪ್ರೇರಕವಾಗಿದೆ. ಸಹಸ್ರಾರು ವರ್ಷಗಳ ಅವಧಿಯಲ್ಲಿ ವಿಸ್ತಾರವಾಗುತ್ತ ಬಂದಿರುವ ಸಾಹಿತ್ಯ ಮತ್ತು ಸಂಸ್ಕೃತಿಗಳು ಪ್ರದೇಶದಿಂದ ಪ್ರದೇಶಕ್ಕೆ, ಜನಾಂಗದಿಂದ ಜನಾಂಗಕ್ಕೆ ವಿಭಿನ್ನ ಸ್ವರೂಪಗಳನ್ನು ತಾಳಿವೆ. ಮನುಷ್ಯನ ಚಿಕಿತ್ಸಕ ಬುದ್ಧಿಯಿಂದ ಸಾಂಸ್ಕೃತಿಕ ಸಂಗತಿಗಳು ಪರಿಷ್ಕರಣೆಗೊಳ್ಳುತ್ತ ಸಾಗುತ್ತಲೇ ಇವೆ. ಪ್ರಸ್ತುತದಲ್ಲಿ ಸಾಮಾಜಿಕ ವ್ಯವಸ್ಥೆ ನಾಗರಿಕ ಪ್ರಪಂಚದ ತುತ್ತತುದಿಯನ್ನು ತಲುಪಿದ್ದರೂ, ಸಾಂಸ್ಕೃತಿಕ ಚಿಂತನೆಗಳು ನಿಸರ್ಗದ ಮಡಿಲಿನಲ್ಲಿಯೇ ಮಥಿಸಲ್ಪಟ್ಟಿವೆ.

ಭಾರತದಂತಹ ಬಹುಸಂಸ್ಕೃತಿಯ ರಾಷ್ಟ್ರದಲ್ಲಿ ಜನರು ಇಂದಿಗೂ ಗಿಡ, ಮರ, ಗರಿಕೆ, ಬಳ್ಳಿಗಳಿಗೆ ಮಹತ್ತರ ಸ್ಥಾನ ಕೊಡುತ್ತಿದ್ದಾರೆ. ಸನಾತನ ಕಾಲದಿಂದಲೂ ಸಸ್ಯ ಸಂಪತ್ತಿನ ಹರವನ್ನು ಪಸರಿಸುತ್ತ, ಬೆಳೆಸುತ್ತ ಬಂದಿದ್ದಾರೆ. ಮೂಲಭೂತ ಅವಶ್ಯಕತೆಗಳ ಪೋಷಕಗಳಾಗಿರುವುದರಿಂದ ಸಸ್ಯಸಂಕುಲವನ್ನು ಪೂಜ್ಯ ಭಾವನೆಯಿಂದ ಕಾಣುತ್ತ ಸಾಧ್ಯವಾದಷ್ಟು ಸಂರಕ್ಷಿಸುವ ಪ್ರಯತ್ನಗಳಲ್ಲಿ ತೊಡಗಿದ್ದಾರೆ.

ಪ್ರಕೃತಿ ಮತ್ತು ಬದುಕು ಎರಡರಲ್ಲೂ ಏಕತೆಯನ್ನು ಸಾಧಿಸಿಕೊಂಡು ಬರುತ್ತಿರುವುದು ಬುಡಕಟ್ಟು ಸಮಾಜ. ಸಾಹಿತ್ಯ ಮತ್ತು ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ಪರಿಸರದ ಬಗೆಗಿನ ಒಲವು, ಕಾಳಜಿಗಳನ್ನು ಉದ್ದೀಪನಗೊಳಿಸುತ್ತಲೇ ಇವೆ. ಗಿರಿಜನರ ನಿಸರ್ಗದೊಂದಿಗಿನ ಬೆಸುಗೆ ಸಾಹಿತ್ಯ ಮತ್ತು ಸಂಸ್ಕೃತಿಯಲ್ಲಿ ಪ್ರಕಟಗೊಂಡಿದ್ದು, ಅವರ ಸಂಸ್ಕೃತಿಯನ್ನು ಅರಣ್ಯ ಸಂಸ್ಕೃತಿ ಎಂದು ಕರೆಯಬಹುದಾದಷ್ಟು ಗಾಢತೆ ಹಾಗೂ ಸಸ್ಯಸಂಕುಲದ ಚಿಂತನೆಗಳು ಕಾಣಸಿಗುತ್ತವೆ.

## ಸಾಹಿತ್ಯ ಮತ್ತು ಸಂಸ್ಕೃತಿ

ಸದಾಕಾಲ ಅಡವಿಯಲ್ಲೆ ವಾಸಿಸುವ ಬುಡಕಟ್ಟು ಜನರು ಪ್ರಕೃತಿಯಲ್ಲಿ ಕಂಡುಂಡ ದುಃಖ ದುಮ್ಮಾನ, ಸುಖ ಸಂತೋಷ ಅದರಲ್ಲೂ ಸಸ್ಯದ ಬಗೆಗಿನ ಜ್ಞಾನ ಸಂಪತ್ತನ್ನು ಸಾಹಿತ್ಯದಲ್ಲಿ ಹೊರ ಚೆಲ್ಲಿದ್ದಾರೆ. ಕಾನನ ಬದುಕಿನ ಅನುಭವಗಳನ್ನು ಗೀತೆ, ಗಾದೆ, ಒಗಟು, ಬೈಗುಳಗಳಲ್ಲಿ ಅಭಿವ್ಯಕ್ತಿಗೊಳಿಸಿದ್ದಾರೆ.

## ಗೀತೆ

ಬುಡಕಟ್ಟು ಸಮುದಾಯದಲ್ಲಿ ಸ್ತ್ರೀಯರ ಬಗೆಗೆ ಅಪಾರವಾದ ಗೌರವವಿದೆ. ಜೀವವೊಂದರ ಹುಟ್ಟಿಗೆ ಕಾರಣಳಾಗುವ ಆಕೆ ಒಂದು ರೀತಿಯಲ್ಲಿ ಪ್ರಕೃತಿ ಮಾತೆಯೇ ಸರಿ. ಸಸ್ಯ ಸಿರಿಯಿಂದಲೇ ಪರಿಸರದವ್ವನ ಮೆರಗು ದುಪ್ಪಟ್ಟಾಗುವುದು. ಆದುದರಿಂದಲೇ ಆದಿವಾಸಿಗಳು ಮಹಿಳೆ ಮತ್ತು ಮರವನ್ನು ಅಬೇಧವಾಗಿ ಕಲ್ಪಿಸಿ ನುಡಿದಿದ್ದಾರೆ.

**ಮುತ್ತುಗ ಮರ ತಾಳಿನಲ್ಲಿ**
**ನೀ ನಮ್ಮಿ ಮುತ್ತಿ ಕೂತಿದ್ದದೂ**
**ಕೆಂದೆ ಮರ ತಾಳಿನಲ್ಲಿ**
**ನೀ ನಮ್ಮಿ ಕೆಂಪಿ ಕೂತಿದ್ದುದೂ**
**ರುದ್ರಾಕ್ಷಿ ಮರ ತಾಳಿನಲ್ಲಿ**
**ನೀ ನಮ್ಮಿ ರುದ್ರಿ ಕೂತಿದ್ದದೂ**
**ಭದ್ರಾಕ್ಷಿ ಮರ ತಾಳಿನಲ್ಲಿ**
**ನೀ ನಮ್ಮಿ ಭದ್ರಿ ಕೂತಿದ್ದದೂ**[1]

ಮುತ್ತುಗದ ಮರದ ಹೆಸರಿನಿಂದ ಮುತ್ತಿ, ಕೆಂದೆ ಮರದ ಹೆಸರಿನಿಂದ ಕೆಂಪಿ, ರುದ್ರಾಕ್ಷಿ ಮರದ ಹೆಸರಿನಿಂದ ರುದ್ರಿ, ಭದ್ರಾಕ್ಷಿ ಮರದ ಹೆಸರಿನಿಂದ ಭದ್ರಿ, ಹೀಗೆ ಮರಗಳ ಹೆಸರನ್ನೇ ಮಹಿಳೆಯರಿಗೆ ನಾಮಾಂಕಿತಗೊಳಿಸಿದ್ದಾರೆ. ಮಗು ಜನಿಸಿದ ದಿನಾಂಕ, ಸಮಯ, ವಾರ, ನಕ್ಷತ್ರಗಳ ಅವಲೋಕನದಿಂದ ಜ್ಯೋತಿಷ್ಯವನ್ನು ಗಮನಿಸಿ ಹೆಸರುಗಳನ್ನಿಡುವವರ ಮಧ್ಯೆ ಪರಿಸರ ಸಂಬಂಧಿಯಾದ ಹೆಸರುಗಳನ್ನಿಟ್ಟಿರುವುದು ಉಲ್ಲೇಖಾರ್ಹ. ಅದರಲ್ಲೂ ಮರದ ಹೆಸರನ್ನೇ ಅನ್ವಯಿಸಿ ನುಡಿದಿರುವುದು ಫಲವತ್ತತೆಯ ಸಂಕೇತವಾಗಿದೆ. ಇಲ್ಲಿ ಪ್ರಸ್ತಾಪವಾಗಿರುವ ಪ್ರತಿಯೊಂದು ಸಸ್ಯವೂ ವಿಶೇಷಣಗಳಿಂದಲೇ ಕೂಡಿವೆ.

## ಮುತ್ತುಗದ ಮರ

ಮುತ್ತುಗದ ಮರವನ್ನು ಬ್ರಹ್ಮವೃಕ್ಷ ಎಂದೂ ಸಂಬೋಧಿಸುತ್ತಾರೆ. ಸಸ್ಯಶಾಸ್ತ್ರೀಯ ಹೆಸರು ಬುಟಿಯ ಮೊನೊಸ್ಪೆರ್ಮ, ಬುಡಕಟ್ಟು ಜನರು ಮುತ್ತುಗದ ಎಲೆಗಳಿಂದ ರಾಗಿರೊಟ್ಟಿಯನ್ನು ಸುಡುತ್ತಾರೆ. ಜೊ(ದೊ)ನ್ನೆಗಳನ್ನು ತಯಾರಿಸುತ್ತಾರೆ. ಫೆಬ್ರವರಿ ಯಿಂದ ಜೂನ್ ತಿಂಗಳವರೆಗೆ ಹೂವುಗಳೂ ಅರಳುತ್ತವೆ. ಅವು ಕೇಸರಿ ಮಿಶ್ರಿತ ಕೆಂಪು ಬಣ್ಣವನ್ನು ಒಳಗೊಂಡಿದ್ದು, ಬೇಸಗೆ ಕಾಲದಲ್ಲಿ ಕಾಡಿಗೆ ಯಾರೊ ಬೆಂಕಿ ಹಚ್ಚಿ ಕಾಡು ಉರಿಯುತ್ತಿರುವಂತೆ ಭಾಸವಾಗುತ್ತದೆ. ಹೂವಿನಿಂದಲೇ ಅಡವಿಯ ಸೌಂದರ್ಯಕ್ಕೆ ಕಿಚ್ಚು ಹಚ್ಚುವ ಮುತ್ತುಗದ ಹೂವನ್ನು ಗಿರಿಜನರು ಬಣ್ಣಿಸುವ ಪರಿಯಿದು.

**ಮುತ್ತುಗ ಗದ್ದೆ ಮುತ್ತಗುವ್ವೆ**

**ಏವ ಮಳಿಕ ಜಲ್ಲೆಂದೆಯೊ**
**ಅಣಕು ಮಳಿಕ ಜಲ್ಲೆಂದೆಯೊ**[2]

ಆಧುನಿಕರು ಇದರ ಬೀಜದಿಂದ ಎಣ್ಣೆಯನ್ನು ಉತ್ಪಾದಿಸಿ ಸಾಬೂನುಗಳ ತಯಾರಿಕೆಯಲ್ಲಿ ಬಳಸುತ್ತಾರೆ. ಬುಡಕಟ್ಟು ಜನರು ಮರದ ತೊಗಟೆಯಲ್ಲಿ ಔಷಧೀಯ ಗುಣವನ್ನು ಶೋಧಿಸಿಕೊಂಡಿದ್ದಾರೆ.

**ಕೆಂದೆಮರ**

ಬುಡಕಟ್ಟು ಜನರಿಗೆ ಇದೊಂದು ದಿವ್ಯ ಔಷಧೀಯ ಸಸ್ಯ. ಕಂದು ಮಿಶ್ರಿತ ಬಣ್ಣದಿಂದ ಕೂಡಿರುವುದರಿಂದ ಈ ಮರಕ್ಕೆ 'ಕೆಂದೆಮರ' ಎಂದು ಹೆಸರಿಸಿದ್ದಾರೆ. ಶೀತ, ಜ್ವರಕ್ಕೆ ಒಳಗಾದಾಗ ಮರದ ಕೊರಡುಗಳಿಂದ ಔಷಧವನ್ನು ಸಿದ್ಧಪಡಿಸಿ ಚಿಕಿತ್ಸೆಯನ್ನು ಪಡೆಯುತ್ತಾರೆ.

**ರುದ್ರಾಕ್ಷಿಮರ**

ರುದ್ರನ ಅಕ್ಷಿಯೇ ರುದ್ರಾಕ್ಷಿ ಎಂಬರ್ಥದಲ್ಲಿ ಹಿಂದೂ ಧರ್ಮವು ರುದ್ರಾಕ್ಷಿಯನ್ನು ಶಿವನ ಕಣ್ಣಿಗೆ ಉಪಮಿಸುತ್ತದೆ. ಪುರಾಣದ ಪ್ರಕಾರ ತ್ರಿಪುರಾಸುರ ರಾಕ್ಷಸನ ಸಂಹಾರದ ಅನಂತರ ಈಶ್ವರನ ಕಣ್ಣಿನಿಂದ ಹೊರಬಂದ ಆನಂದ ಬಾಷ್ಪದ ಬಿಂದುಗಳು ರುದ್ರಾಕ್ಷಿ ಮಣಿಗಳಾದವು. ರುದ್ರಾಕ್ಷಿ ಶಿವನಿಗೆ ಪ್ರಿಯವಾದದ್ದು ಮತ್ತು ಪವಿತ್ರವಾದದ್ದು ಎಂಬ ಭಾವನೆಯಿದ್ದು, ಶಿವಭಕ್ತರ ಕೊರಳಲ್ಲಿ ಮಾಲೆಯಾಗಿಯೂ, ಜಪಮಾಲೆಯಾಗಿಯೂ ಉಪಯೋಗಿಸಲ್ಪಡುತ್ತದೆ. ರುದ್ರಾಕ್ಷಿಗಳಲ್ಲಿ ಪಂಚಮುಖಿ ರುದ್ರಾಕ್ಷಿಯು ಮನ್ನಣೆ ಪಡೆದಿದೆ. ಗಿರಿಜನರು ರುದ್ರಾಕ್ಷಿ ಮಣಿಯನ್ನು ಆಭರಣವಾಗಿ ಬಳಸುತ್ತಾರೆ.

**ಭದ್ರಾಕ್ಷಿ ಮರ**

ಭದ್ರಾಕ್ಷಿ ಮರದ ವೈಜ್ಞಾನಿಕ ಹೆಸರು ಗುರುಮಾ ಅಲ್ಮಿಫೋಲಿಯಾ ಅಥವಾ ಗುರುಮಾ ಟೊಮೆಂಟೋಸಾ. ಮರದ ಎಲೆಗಳೂ ಅಂಡಾಕಾರವಾಗಿದ್ದು ಒರಟಾದ ರಚನೆಯನ್ನು ಹೊಂದಿರುತ್ತವೆ. ಏಪ್ರಿಲ್‌ನಿಂದ ಅಕ್ಟೋಬರ್‌ವರೆಗೆ ಹೂಗಳನ್ನು ಬಿಡುತ್ತದೆ. ಭದ್ರಾಕ್ಷಿ ಬೀಜಗಳನ್ನು ಅತಿಸಾರ ಭೇದಿ, ಶೀತ, ಕೆಮ್ಮು, ರಕ್ತಸ್ರಾವ ಮತ್ತು ವಿಷಪೂರಿತ ಕಾಯಿಲೆಗಳ ಚಿಕಿತ್ಸೆಯಲ್ಲಿ ಬಳಸುತ್ತಾರೆ.

ಬುಡಕಟ್ಟು ಜನರ ಬದುಕು ಬವಣೆಗಳು ಅವಲಂಬಿಸಿರುವುದು ಅರಣ್ಯದ ಸಮೃದ್ಧಿಯನ್ನು ಅಡವಿಯ ಒಡಲು ಕಂಗೊಳಿಸಿದರೆ ಅವರ ಬದುಕು ಹಸನಾದಂತೆ. ಮರ, ಗಿಡ, ಬೆಟ್ಟ, ಗುಡ್ಡಗಳು ತಂದೆ–ತಾಯಿ, ಸಹೋದರ–ಸಹೋದರಿಯರ ಹಾಗೆ. ಅಷ್ಟೇ ಏಕೆ ಮನಸ್ಸಿನ ತುಮುಲಗಳಿಗೆ ಸ್ಪಂದಿಸುವ ಸ್ನೇಹಿತರಿದ್ದಂತೆ. ಆದುದರಿಂದಲೆ ಗೀತೆಯೊಂದರಲ್ಲಿ ದಾಂಪತ್ಯ ಬದುಕಿನಲ್ಲಿ ಉಂಟಾದ ವಿರಸವನ್ನು ಹಾಡುಗಾರನೊಬ್ಬ ಕಾನನದೊಂದಿಗೆ ಸಮೀಕರಿಸಿ ಅಭಿವ್ಯಕ್ತಿಗೊಳಿಸುತ್ತಾನೆ.

**ಮನಗೊಟ್ಟು ನೀಂವು ಕೇಳುನಿಲ**
**ಆರುವೆ ಇಲ್ಲದ ಈ ಕಾನಗಿರಿ**
**ದಿಕ್ಕು ಇಲ್ಲದ ಪರದೇಸಿಲ॥**
**ಬಾಗೆ ಮರ ಕಾಡಿನಲಿ**
**ಬಾಗಿ ಬಾಳೊಪ್ಪಿ ನೀ ಬಂದಿದ್ದಲೆ**
**ದೇಸ ದೇಸವೆ ನಾ ತೋರಿಸೆಲಾ॥**[3]

ಕಾಡಿನ ನಿವಾಸಿಗೆ ಯಾರು ಇಲ್ಲದಿದ್ದರೂ ಕಾನು ಆತನ ಸಂಗಡಕ್ಕೆ ಇದ್ದೇ ಇರುತ್ತದೆ. ಪ್ರೇಯಸಿ ಮೋಸ ಮಾಡಿದರೇನಂತೆ ಸದಾ ಸ್ಪಂದಿಸುವ ಕಾನನ ಗಿರಿಗಳಿವೆ. ಸಂಗಾತಿ ಇಚ್ಛಿಸಿ ಜೊತೆಗೂಡಿದ್ದರೆ ಹಳುವಿನ ಹಾದಿಯಲ್ಲಿ ನಡೆಯುತ್ತ ಪ್ರಕೃತಿ ಸೊಬಗನ್ನು ಉಣಬಡಿಸುತ್ತಿದ್ದ. ಆದರೆ ಈಗ ದಿಕ್ಕಿಲ್ಲದೆ ಕಾನಿನಲ್ಲಿ ಅಲೆಯುತ್ತಿದ್ದಾನೆ. ಕಾನಿನಲ್ಲೂ ಯಾರು ಇಲ್ಲ, ಆತನೊಂದಿಗೂ ಯಾರೂ ಇಲ್ಲ ಎಂಬ ತಾತ್ಪರ್ಯದಲ್ಲಿ ಕಾಡೇ ಜೀವಾಳ ಎಂಬ ಆಶಯವನ್ನು ಮನಗಾಣುತ್ತಾನೆ.

ಪ್ರತಿನಿತ್ಯದ ಮೂಲಭೂತ ಚಟುವಟಿಕೆಗಳಿಗೆ ಮರದ ಕಟ್ಟಿಗೆಗಳು ಪೂರಕವಾಗಿವೆ. ಆಹಾರ ತಯಾರಿಕೆ ಹಾಗೂ ಬೆಳಕಿಗಾಗಿ, ಅನೇಕ ವೇಳೆ ಅರಣ್ಯ ಮೃಗಗಳಿಂದ ಜೀವ ರಕ್ಷಣೆ ಹೊಂದಲು ಉಪಯೋಗಿಸಲ್ಪಡುತ್ತವೆ (ಕಟ್ಟಿಗೆಗಳಿಂದ ಜೀವ ರಕ್ಷಣೆಗಾಗಿ ಸೂಟೆಯನ್ನು ತಯಾರಿಸಿಕೊಳ್ಳುತ್ತಾರೆ) ಅಂತಹ ಮರಗಳ ವಿಸ್ತೃತ ಪಟ್ಟಿಯನ್ನೇ ಗೀತೆಯಲ್ಲಿ ನೀಡಿದ್ದಾರೆ.

**ಬೆಂಡೆಯ ಸೊಯ್ದೆ । ಗೋರುಕನಾದಿ**
**ಮತ್ತೀಯ ಸೊಯ್ದೆ । ಗೋರುಕನಾದಿ**
**ಹೊನ್ನೆಯ ಸೊಯ್ದೆ । ಗೋರುಕನಾದಿ**
**ತೇಕಿನ ಸೊಯ್ದೆ । ಗೋರುಕನಾದಿ**
**ಬೆಜ್ಜದ ಸೊಯ್ದೆ । ಗೋರುಕನಾದಿ**
**ತಾರೀಯ ಸೊಯ್ದೆ । ಗೋರುಕನಾದಿ**
**ಅತ್ತೀಯ ಸೊಯ್ದೆ । ಗೋರುಕನಾದಿ**
**ದಡಸಿನ ಸೊಯ್ದೆ । ಗೋರುಕನಾದಿ**[4]

. . . . . . . . . . . . . . . . .

ಬೆಂಡೆ, ಮತ್ತಿ, ಹೊನ್ನೆ, ತೇಗ, ದಡಸು, ತಾರಿ, ಬೆಜ್ಜ, ಆಲ, ಉರುಗ, ಚಿಲ್ಲಿ, ಜಾಲ, ನೇರಳೆ, ಸುರಗಿ, ಹೊಂಗೆ, ನೆಲ್ಲಿ, ಕಣಿಗಿಲೆ, ಹುಣಿಸೆ, ಹಲಸು, ಸೀಗೆ, ಮಡ್ಡಿ, ಮಾವು, ಬೇವು, ಕಕ್ಕೆ, ಗೊಟ್ಟಿ, ಅರಳಿ, ಗೊಬ್ಬಳೀ, ಪೀಕಿ, ಬೂರ, ಬೇಲ, ಇಟ್ಟಿ, ಕಾಡುಣಿಸೆ ಇತ್ಯಾದಿ ಮರಗಳ ಕಟ್ಟಿಗೆಗಳನ್ನು ಉಪಯೋಗಿಸುವ ಸಂಗತಿ ಉಕ್ತವಾಗಿದೆ.

ಉಲ್ಲೇಖಿತ ಸಸ್ಯಗಳು ಗಿರಿಜನರ ನಾಟಿ ವೈದ್ಯ ಪದ್ಧತಿಯಲ್ಲಿ ಗಿಡಮೂಲಿಕೆಗಳಾಗಿ ಬಳಸಲ್ಪಡುತ್ತವೆ. ಕೆಲವು ಕಟ್ಟಿಗೆಗಳನ್ನು ಸುಟ್ಟಾಗ ದೊರೆಯುವ ಇದ್ದಿಲಿನ ಮಸಿಯಿಂದ ಸುಟ್ಟಗಾಯಗಳಿಗೆ ಮದ್ದನ್ನು ಸಿದ್ಧಪಡಿಸುತ್ತಾರೆ. ನೇರಳೆ ಮರದ ತೊಗಟೆಯನ್ನು ಭೇದಿಗೆ, ಬೆಂಡೆ ಮರದ ನಾರನ್ನು ತಲೆಯ ಸ್ನಾನಕ್ಕೆ, ಚಿಲ್ಲದ ಮರದ ಬೀಜವನ್ನು ತಲೆನೋವಿಗೆ– ಹೀಗೆ ಒಂದೊಂದು ಮರದ ಒಂದೊಂದು ಭಾಗಗಳು ನಾನಾ ರೀತಿಯ ಕಾಯಿಲೆಗಳಿಗೆ ಔಷಧಗಳಾಗಿವೆ.

ಸಸ್ಯಸಂಕುಲದ ಹುಟ್ಟಿಗೆ ಮಣ್ಣಿನ ಫಲವತ್ತತೆ ಕಾರಣವಾಗಿದೆ. ಪ್ರಕೃತಿಯು ಸೃಷ್ಟಿಕ್ರಿಯೆಯ ಮುಖಾಂತರ ನೆಲದ ಗುಣವನ್ನು ಕಾಯ್ದುಕೊಳ್ಳುತ್ತದೆ. ಕಾಡುಜನರ ಕವಿತೆಯು ನಿಸರ್ಗ ಸಸ್ಯ ಸಂಪತ್ತನ್ನು ನಿರ್ಮಿಸುವ ಪರಿಯನ್ನು ಚಿತ್ರಿಸುತ್ತದೆ.

**ಮಣ್ಣು ತೆಗೆ ತೆಗೆ ಮಣ್ಣಕ್ಕಿ ಮಾವ**
**ಅರಳೂ ಕಡ್ಡೆಲ್ಲ ಮಣ್ಣಕ್ಕಿ ಗೂಡು**
**ಸೀಬೆ ಕಡ್ಡೆಲ್ಲ ಮಣ್ಣಕ್ಕಿ ಗೂಡು**
**ನೇರಿ ಕಡ್ಡೆಲ್ಲ ಮಣ್ಣಕ್ಕಿಗೂಡು**
**ಗೆಳಸು ಕಡ್ಡೆಲ್ಲ ಮಣ್ಣಕ್ಕಿ ಗೂಡು**[5]
. . . . . . . . . . . . . . .

ಸಸ್ಯಗಳ ಎಲೆ, ಕಾಂಡ, ಹೂವು, ಹಣ್ಣುಗಳು ಕತ್ತರಿಸಿ ನೆಲದ ಮೇಲೆ ಬಿದ್ದು ಮಣ್ಣಿನಲ್ಲಿ ಗೊಬ್ಬರವಾಗಿ ಗಿಡದ ಬೆಳೆವಣಿಗೆಗೆ ಬೇಕಾದ ಸ್ವಾಭಾವಿಕ ಪೋಷಕಾಂಶಗಳನ್ನು ಒದಗಿಸುತ್ತವೆ. ಹೀಗೆ ನಿರ್ಮಿತವಾದ ಮಣ್ಣಿನ ಮನೆಯಲ್ಲಿ ಸಸ್ಯದ ಬೀಜಗಳು ಮೊಳೆತು ಸಸಿಯಾಗಿ, ಗಿಡವಾಗಿ, ಮರವಾಗಿ ಬೆಳೆಯುತ್ತವೆ.

"ಮನೆಗೊಂದು ಮರ ಊರಿಗೊಂದು ವನ" ಎಂಬಂತೆ ಸಸ್ಯಗಳನ್ನು ನೆಡುವ ಗಿರಿಜನರು ತಮ್ಮ ಸುತ್ತಮುತ್ತಲಿನ ಪರಿಸರದಲ್ಲಿ ತೋಟಗಳನ್ನೇ ನಿರ್ಮಿಸುತ್ತಾರೆ. ಅಗತ್ಯವಾದ ಗಿಡ ಮರಗಳನ್ನು ಪೋಷಿಸಿ ಅದರ ಫಲವನ್ನು ಇತರರೊಂದಿಗೂ ಹಂಚಿಕೊಳ್ಳುತ್ತಾರೆ.

**ನೆಲ್ಲಿಕಾಯಿ ನೇರಿ ಮೇಲೆ ಲೇಲಂಗಡಿ ಲೇಲ**
**ದಿರ್ರಿರಂಗನ ತೂಗಿ ಪೋನ ಲೇಲಂಗಡಿ ಲೇಲ**
**ದೊಡ್ಡ ಗುಲಾಬಿ ಹೂವೆ, ಸಿಕ್ಕ ಗುಲಾಬಿ ಹೂವೆ**
**ಎತ್ತಕ ಓಗುರಿದ್ದೆ, ತೋಟಾಕ ಓಗುರಿನೆ**
**ತೋಟದಲಿ ಏನ ಮಾಡಿದೆ, ಕಳೆಕಿತ್ತು ಗಿಡಕ ನೀರಾಕಿಸಿ**
**ಗಿಡವ ಏನ ಮಾಡಿದೆ, ಬೆಳೆಸಿನೆ**
**ಏವ ಗಿಡವ ಬೆಳೆಸಿದೆ, ನುಗ್ಗೆ ಗಿಡವ ಬೆಳೆಸಿದೆ**[6]
. . . . . . . . . . . . . . . . . . . . . . .

ನೆಲ್ಲಿ, ನೇರಳೆ ಮರಗಳು ಬೆಳೆದಿರುವ ದಿಬ್ಬದಲ್ಲಿ ಹೂವಿನ ಗಿಡಗಳು ಹಾಗೂ ಇತರ ಸಸಿಗಳನ್ನು ನೆಟ್ಟು ಅಲ್ಲಿ ಒಂದು ತೋಟವನ್ನು ನಿರ್ಮಿಸಿ, ಕಳೆಕಿತ್ತು ಗಿಡಗಳಿಗೆ ನೀರುಣಿಸಿದ ಬಗೆಯನ್ನು ಹಾಡುಗಾರರು ನುಡಿಯುತ್ತಾರೆ.

ಬುಡಕಟ್ಟು ಜನರು ಮನೆಯ ಅಂಗಳದಲ್ಲಿ ಗಿಡಮರಗಳನ್ನು ನೆಟ್ಟು ಪೋಷಿಸುತ್ತಾರೆ. ಔಷಧ, ಆಹಾರ ಸೇವನೆಯಲ್ಲಿ ಬಳಕೆಯಾಗುವ ಸಸ್ಯಗಳು ಯಥೇಚ್ಛವಾಗಿರುತ್ತವೆ.

**ಬೇಗಾರೆ ಬೆಂದ ಕರಿಮಾಳ**
**ತಬ್ಬಲಿ ಹಾಕಿದ ಕುಂಬಳ**
**ಹಬ್ಬಿತು ಗುಡುಗಿತು ಮೆನೆಮೇಲೆ**
**ಇಬ್ಬನಿ ಮೀಡಿ ಬೋರೆಂದೋ**[7]
. . . . . . . . . . . . . . .

ಬುಡಕಟ್ಟು ಜನರದು 'ಕುಂಭಿ ಬೇಸಾಯ ಪದ್ಧತಿ'. ಆಹಾರೋತ್ಪನ್ನಗಳನ್ನು ಬೆಳೆಯುವ ಮುನ್ನ ನೆಲದಲ್ಲಿರುವ ಚಿಕ್ಕ ಪುಟ್ಟ ಗಿಡಗಂಟಿಗಳನ್ನು ಕಿತ್ತು ಸುಡುತ್ತಾರೆ. ಹದಗೊಂಡ ಭೂಮಿಯನ್ನು ಗುದ್ದಲಿಯಿಂದ ಅಗೆದು ಬೀಜ ಬಿತ್ತನೆ ಮಾಡುತ್ತಾರೆ. ಹೀಗೆ ಬೆಂದು ಇದ್ದಲಿನಿಂದ ಕೂಡಿದ ಕಪ್ಪನೆಯ ಅಂಗಳದಲ್ಲಿ ತಬ್ಬಲಿಯೊಬ್ಬಳು ಕುಂಬಳದ ಬೀಜವನ್ನು ನೆಡುತ್ತಾಳೆ. ಕುಂಬಳದ ಲತೆ ಕವಲೊಡೆದು ಗುಡಿಸಿಲಿನ ಮೇಲೆಲ್ಲ ಹಬ್ಬಿ, ಇಬ್ಬನಿಯ ಹನಿಯಲ್ಲಿ ಮಿಂದು ಬಹಳಷ್ಟು ಹೂವು, ಕಾಯಿ, ಹಣ್ಣನ್ನು ಬಿಟ್ಟಿತು.

ಆದಿವಾಸಿ ಜನರಲ್ಲಿ ಪರಸ್ಪರ ಇಚ್ಛಿಸಿ ಕಾಡಿಗೆ ಓಡಿಹೋಗಿ ವಿವಾಹವಾಗುವ ಪದ್ಧತಿ ಚಾಲ್ತಿಯಲ್ಲಿದೆ. ಅರಣ್ಯಕ್ಕೆ ಓಡಿ ಹೋದ ಪ್ರೇಮಿಗಳಿಗೆ ಮರಗಿಡಗಳೇ ಆಸರೆ. ಪ್ರಿಯಕರನನ್ನು ಸರಸಕ್ಕೆ ಎಳೆಯುವ ಪ್ರಿಯತಮೆ ಅಲ್ಲಿಯ ಚೆಲುವನ್ನು ಸೊಗಸಾಗಿ ಬಣ್ಣಿಸುತ್ತಾಳೆ.

**ಆಲಜಾಲದ ಮರ**
**ಸಾಲು ಮತ್ತೀಯ ಮರ**
**ಸಾಲು ಮತ್ತೀಯ ಮರವೆ**
**ಏನಯ್ಯ ರಾಜ, ಸಾಲು ಮತ್ತೀಯ ಮರವೇ**
**ಬೆಂಡೆ ಮಂಚಕ್ಕೆ ಬಾರೊ**
**ತೂಗು ಮಂಚಕ್ಕೆ ಬಾರೊ**
**ಉಬ್ಬರುವೆ ತೂಗಾಡೋಣ**[8]
. . . . . . . . . . . . .

ಆಲ, ಜಾಲ, ಮತ್ತಿ ಮರದ ಕಿಂಚಿ, ಕೊಂಬೆಗಳು ನೆಲಕ್ಕೆ ಬಾಗಿ ಮಂಚವಾಗಿ ಉಯ್ಯಾಲೆಯಂತೆ ತೂಗುತ್ತಿದೆ ಅಂತಹ ಮರಗಳ ಮೇಲೆ ಕುಳಿತುಕೊಳ್ಳುವ ಇಂಗಿತ ಪ್ರೇಮಿಗಳಲ್ಲಿದೆ.

ದೈವತ್ವದ ಬಗೆಗೆ ಅಚಲವಾದ ನಂಬಿಕೆಯನ್ನು ಹೊಂದಿರುವ ಬುಡಕಟ್ಟು ಜನರು ಗಿಡ, ಮರಗಳನ್ನು ಆರಾಧಿಸುತ್ತ, ಸಂರಕ್ಷಿಸುತ್ತ ಬರುತ್ತಿದ್ದಾರೆ.

**ದೊಡ್ಡ ಸಂಪಾಗೆ ನನ್ನೊಡೆಯ**
**ಕಾತು ಕಾಪಾಡಿ ಮಡಗುನಯ್ಯ**
**ಕೂಸು ಕುಂಚೆಲ್ಲ ನಿನ್ನದಯ್ಯೊ**
**ಮೊಗ್ಗು ಮೋರೆಲ್ಲ ನಿನ್ನದಯ್ಯೊ**[9]
. . . . . . . . . . . . . .

ಶತಮಾನಗಳಷ್ಟು ಪುರಾತನವಾದ ಸಂಪಿಗೆ ಮರವೊಂದು ಬಿಳಿಗಿರಿರಂಗನ ಬೆಟ್ಟದ ಅರಣ್ಯ ಪ್ರದೇಶದಲ್ಲಿದೆ. ಅಡವಿಯ ದೇವತೆಗಳು ಮರದಲ್ಲಿ ನೆಲಸಿದ್ದಾರೆ ಎಂಬ ನಂಬಿಕೆಯಿದ್ದು, ಮರವನ್ನು ಪೂಜಿಸುತ್ತ, ಹಬ್ಬವನ್ನು ಆಚರಿಸುತ್ತ ಬರುತ್ತಿದ್ದಾರೆ. ಗಿರಿಜನರಿಗೆ ಇದೊಂದು ಪುಣ್ಯಕ್ಷೇತ್ರವೆನಿಸಿದೆ.

ಸಂಸ್ಕೃತದಲ್ಲಿ ವಂಶ, ವೇಣು, ಯುವ ಫಲ, ಶತಪರ್ವ ಎಂದು ಹೆಸರಿಸಿಕೊಳ್ಳುವ ಬಿದಿರು ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ಜನಮನ್ನಣೆ ಪಡೆದ ಸಸ್ಯ. ಪ್ರಪಂಚದಾದ್ಯಂತ ಸುಮಾರು 550 ಪ್ರಭೇದದ ಬಿದಿರು ಸಸ್ಯಗಳನ್ನು ಗುರುತಿಸಲಾಗಿದೆ. ಬುಡಕಟ್ಟು ಜನರಲ್ಲಿ ಬಿದಿರನ್ನು ಕುರಿತ ಗೀತೆಗಳಿವೆ.

**ಹೆಬ್ಬಿದಿರು ಕಿರಿಬಿದಿರು**
**ಹಬ್ಬಿ ತಯ್ಯುವ ಗಿರಿಮುಂದೆ**
**ತಾಳವ ತರ್ತು, ತಲೆ ಬಳ್ಸಿಟ್ಟು**
**ಗೆಜ್ಜೆ ಮಲೆಯಿಂದಾಚೆ**[10]

ಬಿದಿರಿನ ಬೆಳೆವಣಿಗೆ ಗಾತ್ರ, ಉಪಯೋಗಗಳ ಆಧಾರದ ಮೇಲೆ ಎರಡು ಜಾತಿಯನ್ನು ಗುರುತಿಸಿದ್ದಾರೆ. ಒಂದು ಹೆಬ್ಬಿದಿರು, ಮತ್ತೊಂದು ಕಿರುಬಿದಿರು. ಹೆಬ್ಬಿದಿರನ್ನು ಹೆಚ್ಚಾಗಿ ಕರಕುಶಲ ಕಲೆಗಳಲ್ಲಿ ಬಳಸುತ್ತಾರೆ. ಆಹಾರವನ್ನು ಬೇಯಿಸಲು ಕತ್ತರಿಸಿದ ಬಿದಿರಿನ ಬೊಂಬಿಗೆ ಧಾನ್ಯ ಹಾಗೂ ನೀರನ್ನು ಸೇರಿಸಿ ಮೇಲ್ಭಾಗವನ್ನು ಸೊಪ್ಪಿನಿಂದ ಮುಚ್ಚಿ ಬೆಂಕಿಯಲ್ಲಿಟ್ಟು ಸುಡುತ್ತಾರೆ. ಬಿದಿರಿನ ಹಂಡೆಗಳನ್ನು ತಯಾರಿಸಿ, ನೀರು ತರಲು, ಧಾನ್ಯಗಳು, ಉಪ್ಪು, ಕಾನುಧೂಪ ಇತ್ಯಾದಿ ಸರಕು ಸಾಮಗ್ರಿಗಳನ್ನು ತುಂಬಿಡಲು ಉಪಯೋಗಿಸುತ್ತಾರೆ. ಜೇನುತುಪ್ಪ, ಪಾನೀಯಗಳನ್ನು ಬಿದಿರಿನ ಕೊಟ್ಟಗಳಲ್ಲಿ ಶೇಖರಿಸಿಡುತ್ತಾರೆ. ಕಿರು ಬಿದಿರನ್ನು ಹೆಚ್ಚಾಗಿ ಆಹಾರದಲ್ಲಿ ಬಳಸುತ್ತಾರೆ. ಬಿದಿರು ಕಳಲೆ, ಬಿದಿರು ಅಕ್ಕಿಯನ್ನು ಬೋಜಿಸುತ್ತಾರೆ. ಗಿಡಮೂಲಿಕೆಯಾಗಿಯೂ ಉಪಯೋಗಿಸುತ್ತಾರೆ(ಸುಟ್ಟ ಗಾಯಗಳಿಗೆ ಬಿದಿರನ್ನು ಸುಟ್ಟು ಇದ್ದಲನ್ನು ನುಣ್ಣಗೆ ಅರೆದು ಗಾಯದ ಮೇಲೆ ಲೇಪಿಸುತ್ತಾರೆ)

ಬುಡಕಟ್ಟು ಜನರು ರೋಗ ರುಜಿನಗಳಿಗೆ ಒಳಗಾದಾಗ ಗಿಡಮೂಲಿಕೆಗಳಿಂದ ಔಷಧ ಸಿದ್ಧಪಡಿಸಿ, ಅದನ್ನು ಮಂತ್ರದಿಂದ ಮಂತ್ರಿಸುತ್ತಾರೆ. ಅಂತಹ ಮಂತ್ರಗಳಲ್ಲಿ ಸಸ್ಯಸಂಕುಲದ ಪರಿಚಯ ಅಡಕವಾಗಿರುತ್ತದೆ.

**ಗುರು ಗುರು ಬಾಳಿಗೆ**
**ಗುರು ಸುರು ಪಾದ ಗುರು ಬಾಳಿಗೆ**
**ಕಕ್ಕೆ ತಾಳಿನ ಕರಿನಾಗ**
**ಎಕ್ಕದ ತಾಳಿನ ಎಳನಾಗ**
**ಮುತ್ತುಗದ ತಾಳಿನ ಮುದುನಾಗ**
**ನನ್ನ ಮಂತುರ ಮೇಲಾಗಿ**
**ನಿನ್ನ ಸಿಂಗಿ ಕಿತ್ತು**
**ಸಿವನ ಲೋಕಕೋಗುರು**
**ಬಾ ಉರುಬಾಳಿಗೆ !**[11]

ಹಾವು ಕಡಿದಾಗ ಔಷಧವಾಗಿ ಬಳಸಲ್ಪಡುವ ಸಸ್ಯಗಳ ಉಲ್ಲೇಖವಿದೆ. ಕಕ್ಕೆ, ಎಕ್ಕ, ಮುತ್ತುಗದ ಮರಗಳನ್ನು ತಿಳಿಸಿದ್ದಾರೆ. ಸಂಸ್ಕೃತ ಭಾಷೆಯಲ್ಲಿ **'ಸುವರ್ಣಕ'** ಎಂದು ಕರೆಯಿಸಿಕೊಳ್ಳುವ ಕಕ್ಕೆ ಮರದ ಸಸ್ಯ ಶಾಸ್ತ್ರೀಯ ಹೆಸರು **'ಕಾಸಿಯ ಫಿಸ್ಟುಲ'**. ಹಳದಿ ಬಣ್ಣದಲ್ಲಿ ಗೊಂಚಲು ಗೊಂಚಲಾಗಿ ಬಿಡುವ ಈ ಮರದ ಪುಷ್ಪಗಳನ್ನು ಗಿರಿಜನರು ದೇವರ ಪೂಜೆಗೆ ಉಪಯೋಗಿಸುತ್ತಾರೆ. ಆಯುರ್ವೇದದ ಔಷಧಗಳಲ್ಲೂ ಇದರ ಉಪಯುಕ್ತತೆಯಿದೆ. ಕಕ್ಕೆ ಮರದ ಬೇರನ್ನು ನಾಗರಹಾವು ಕಡಿದಾಗ ಅರೆದು ಕುಡಿಸುತ್ತಾರೆ. ಹಾವು ಕಚ್ಚಿದ ಜಾಗಕ್ಕೆ ಲೇಪನ ಮಾಡಿ ಎಕ್ಕದ ಎಲೆಯಿಂದ ಕಟ್ಟುತ್ತಾರೆ. ಮೇಲಿನ ಮಂತ್ರ ಈ ಸಂಗತಿಯತ್ತ ಬೆಳಕು ಚೆಲ್ಲಿದೆ.

ಸಸ್ಯದ ಸಂಪನ್ಮೂಲಗಳಾದ ಹೂವು, ಕಾಯಿ, ಹಣ್ಣುಗಳ ಬಗೆಗೆ ಗಿರಿಜನರಲ್ಲಿ ವಿಪುಲವಾದ ಸಾಹಿತ್ಯ ಕೃಷಿ ನಡೆದಿದೆ. ಪುಸುಮಗಳನ್ನು ಕುರಿತಂತೆ ಅನೇಕಾನೇಕ ಗೀತೆಗಳಿವೆ

**ಯರಕಿನ ಗದ್ದೆ ಯರಕಿನುವ್ವೆ**
**ಏವ ಮಳೆಕ ಜಲ್ಲೆಂದೆಯೊ**
**ತೆರ್ದ ಮಳೆಕ ಜಲ್ಲೆಂದೆಯೊ**
**ಬೂದಿ ಪಡಗೂರ ಬೂರದುವ್ವೆ**
**ಏವ ಮಳೆಕ ಜಲ್ಲೆಂದೆಯೊ**
**ಅಂಜು ಮಳೆಕ ಜಲ್ಲೆಂದೆಯೊ**[12]
. . . . . . . . . . . . . . .

ಯರಕು, ಬೂರ, ಜಾಜಿ, ಜಾಲ, ನೆಲ್ಲಿ, ಮುತ್ತುಗ, ಸೇಬು ಮುಂತಾದ ಹೂವುಗಳು ಮಳೆಯಲ್ಲಿ ನೆನೆದ ರೀತಿಯನ್ನು ಅಮೋಘವಾಗಿ ಚಿತ್ರಿಸಿದ್ದಾರೆ.

**ಕಾಡಗೊಟ್ಟಿಯ ಹಣ್ಣು, ಕೋಲೆ ಜೇನು**
**ಕಜ್ಜೂರದಣ್ಣು ಸಪ್ಪರಿದು ಸವಿನೋಡಿದಲೆ**
**ಸೀಗೆ ನಾಡ ಸಿವನು!**[13]

ಗೊಟ್ಟಿಹಣ್ಣು, ಕಾರೆಹಣ್ಣು, ನೇರಳೆಹಣ್ಣು, ಮಾವು, ದಡಸು, ಕಜ್ಜೂರ, ಸೊಳ್ಳಿಹಣ್ಣು, ಹಲಸು ಇತ್ಯಾದಿ ಹಣ್ಣುಗಳನ್ನು ಜೇನುತುಪ್ಪದಲ್ಲಿ ಬೆರೆಸಿ ಸವಿಯುವ ಪರಿಯನ್ನು ನುಡಿಯುತ್ತಾರೆ.

**ಗಾದೆ**

ಜನ ಸಾಮಾನ್ಯರ ಬದುಕಿನ ವಿವಿಧ ಅನುಭವಗಳ ಸಾರವೇ ಗಾದೆಗಳು. ಗಾದೆಗಳ ಸೃಷ್ಟಿಯಲ್ಲಿ ಸಾಮಾಜಿಕ ಪರಿಸರ ವ್ಯವಸ್ಥೆಯು ನಿರ್ಣಾಯಕ ಪಾತ್ರವಹಿಸುತ್ತದೆ. ಅಡವಿಗಳಲ್ಲಿ ಜೀವಿಸುವ ಬುಡಕಟ್ಟು ಜನರು ತಮ್ಮ ಭೌಗೋಳಿಕ ನೆಲೆಗೆ ಅನುಗುಣವಾಗಿ ಮಾನವನ ನಡವಳಿಕೆಯನ್ನು ಅರಿತು ತಮ್ಮದೇ ಆದ ಗಾದೆಗಳ ಪಡಿಯಚ್ಚನ್ನು ಸಿದ್ಧಪಡಿಸಿದ್ದಾರೆ. ಅವುಗಳಲ್ಲಿ ಸಸ್ಯ ರೂಪವು ಸಹಜವಾಗಿಯೇ ಮೈದೋರಿದೆ.

ಸಸ್ಯಗಳ ಗುಣಗಳನ್ನು ಮಾನವನಿಗೆ ಅನ್ವಯಿಸಿ ಹೇಳುವ ಹಲವಾರು ಗಾದೆಗಳು ಬುಡಕಟ್ಟು ಜನರಲ್ಲಿದೆ. ಅಂತಹ ಕೆಲವು ಗಾದೆಗಳನ್ನು ಪ್ರಾಸಂಗಿಕವಾಗಿ ಪ್ರಸ್ತಾಪಿಸುವುದಾದರೆ ನಾಡಾಡಿಕೇನ ಗೊತ್ತು ನಾರಿನ ರುಸಿ, ನೆಟ್ಟಗಿರ ಮರಕವೆ ತಾ ಕೇಳ್ಳಿ ಊಡಾದು, ಫಲ ಹಾಕ್ದಂವ ಪಾಪ ಕಳ್ತುನು.

**ಅಂಬಿಗ ಮರದಾಸೆ ಮಕ್ಕಳಿಗ ಅವ್ವೆ ಆಸೆ**[14]

ಜಗತ್ತಿನ ಜೀವ ಸಂಕುಲ ಒಂದನೊಂದು ಆಶ್ರಯಿಸಿಯೇ ಬದುಕುತ್ತಿವೆ. ಬಳ್ಳಿಯು ಹುಟ್ಟುವುದೇ ಮರದ ಆಸರೆಯಿಂದ ಅದು ಬೆಳವಣಿಗೆ ಹೊಂದಲು ಮರವು ಆಧಾರವಾಗಿ ನಿಲ್ಲುತ್ತದೆ. ಅಂತೆಯೆ ಮಕ್ಕಳಿಗೆ ತಾಯಿಯೇ ಆಸರೆ, ಆಕೆಯ ಪೋಷಣೆಯಲ್ಲೆ ಮಕ್ಕಳು ಬೆಳೆಯಲು ಇಚ್ಛಿಸುತ್ತವೆ ಎಂಬ ಆಶಯ ಗಾದೆಯಲ್ಲಿ ಧ್ವನಿತವಾಗಿದೆ. ಮರಕ್ಕೆ ಬಳ್ಳಿ ಹೇಗೋ ತಾಯಿಗೆ ಮಕ್ಕಳೂ ಹಾಗೇ ಎಂಬುದು ಬುಡಕಟ್ಟು ಜನರ ಅಭಿಮತ.

**ನಾಂವೆ ಒಂದು ಗರ್‍ಕೆ ಅವೆ ಒಂದು ಕತ್ತೆ**[15]

ಪ್ರತಿಯೊಂದು ಸಮಾಜದಲ್ಲೂ ಜನರಿಗೆ ತೊಂದರೆ ಕೊಡುವ, ಹಿಂಸೆ ನೀಡುವ ಮಂದಿ ಇದ್ದೇ ಇರುತ್ತಾರೆ. ಅಂತಹವರ ನಡುವೆ ಗರಿಕೆಯಂತೆ ಮತ್ತೆ ಮತ್ತೆ ಚಿಗುರಿ ಸೆಟೆದು ನಿಲ್ಲುವ ಪ್ರವೃತ್ತಿಯನ್ನು ಬೆಳೆಸಿಕೊಳ್ಳಬೇಕೆಂಬ ಆಶಯ ಇಲ್ಲಿ ವ್ಯಕ್ತವಾಗಿದೆ.

**ಒಗಟು**

ಒಗಟುಗಳು ಮನುಷ್ಯನ ಬುದ್ಧಿವಂತಿಕೆಯನ್ನು ಒರೆಗೆ ಹಚ್ಚುವ ಕೆಲಸವನ್ನು ನಿರ್ವಹಿಸುತ್ತವೆ. ಒಗಟು ಎಂದರೆ ವಿಷಯಗಳನ್ನು ಕಲ್ಪನೆಯಲ್ಲಿ ಕಟ್ಟಿ ನುಡಿಯುವುದು. ಗಿರಿ ಕಾನನ ವಾಸಿಗಳ ಒಗಟುಗಳಲ್ಲಿ ಮರ, ಗಿಡಗಳ ಸಂಗತಿಗಳು ಉಕ್ತವಾಗಿವೆ.

**ಹಸಿರು ಸಪ್ಪರದೊಳಗೆ ಜಾಲದುವ್ವಿನೊದಿಕೆ ಮುಚ್ಚುರು**
**ಬಿಳಿಲಿಂಗದಲಿ ಸಾಮಿ ಕೂತವನೆ**[16]

ಹಬ್ಬಗಳಲ್ಲಿ ದೇವರಿಗೆ ಸೊಪ್ಪಿನ ಚಪ್ಪರವನ್ನು ಕಟ್ಟಿ, ಅದರೊಳಗೆ ಲಿಂಗವನ್ನಿಟ್ಟು ಪುಷ್ಪಗಳಿಂದ ಪೂಜಿಸುವ ಪರಿ ಇಂದಿಗೂ ರೂಢಿಯಲ್ಲಿದೆ. ಇಂತಹ ಆಲೋಚನೆಯಲ್ಲಿ ಹಲಸಿನ ಹಣ್ಣನ್ನು ಕುರಿತು ಈ ಒಗಟು ಹುಟ್ಟಿಕೊಂಡಿದೆ.

**ಹುಲ್ಲು ಹಾಕಿದರೆ ಹಾಲ ಕೊಡದಿಲ್ಲೆ**
**ಕಲ್ಲು ಹಾಕಿದರೆ ಹಾಲ ಕೊಟ್ಟಾದೆ**[17]

ಕಳ್ಳಿ ಗಿಡದ ಮೇಲೆ ಹುಲ್ಲನ್ನು ಎಸೆದರೆ ಹಾಲು ಬರುವುದಿಲ್ಲ. ಅದೇ ಕಲ್ಲಿನಿಂದ ಒಡೆದರೆ ಗಿಡದಿಂದ ಹಾಲು ಚಿಮ್ಮುತ್ತದೆ. ಗಿಡದ ಈ ಗುಣವನ್ನು ಒಗಟಿನಲ್ಲಿ ನುಡಿದಿದ್ದಾರೆ.

**ಬೈಗುಳ**

ಸಾಮಾನ್ಯವಾಗಿ ಬೈಗುಳ ಎಂದರೆ ವ್ಯಕ್ತಿಯ ಗೌರವ, ಮರ್ಯಾದೆಗಳಿಗೆ ಚ್ಯುತಿ ತರುವಂತಹ ಪದ ಪ್ರಯೋಗಗಳಾಗಿವೆ. ಸಾಮಾಜಿಕ ವ್ಯವಸ್ಥೆಯಲ್ಲಿ ಒಬ್ಬನು ಮತ್ತೊಬ್ಬನಿಗೆ, ಮತ್ತೊಬ್ಬನು ಮಗದೊಬ್ಬನಿಗೆ ಒಂದಲ್ಲ ಒಂದು ರೀತಿ ಬೈಯುತ್ತಲೇ ಇರುತ್ತಾರೆ. ಅಡವಿ ಜನರ ಬೈಗುಳಗಳಲ್ಲಿ ಪರಿಸರ ಸಂಬಂಧಿ ಚಿತ್ರಣಗಳು ಅಧಿಕವಾಗಿದ್ದು, ಸಸ್ಯ ಜಗತ್ತನ್ನು ಅನಾವರಣಗೊಳಿಸುತ್ತವೆ.

**ಗೊಬ್ಳಿ ಮುಂಡು**[18]

ಕರೀ ಜಾಲಿ ಎಂದು ಕರೆಯಲ್ಪಡುವ ಗೊಬ್ಬಳಿ ಮರದ ವೈಜ್ಞಾನಿಕ ಹೆಸರು ಅಕೇಸಿಯ ಅರ್‍ಯಾಬಿಕ. ಪೊದೆ ಆಕಾರದಲ್ಲಿ ಚದುರಿದಂತೆ ಮುಳ್ಳುಗಳಿಂದ ಕೂಡಿರುವ ಈ ಮರದ ತೊಗಟೆ ಕಪ್ಪು ಬಣ್ಣದಿಂದ ಕೂಡಿರುತ್ತದೆ. ಅತಿ ಕಪ್ಪನೆಯ ದೇಹವನ್ನುಳ್ಳ ವ್ಯಕ್ತಿಯನ್ನು ಈ ಮರದ ಕೊರಡಿಗೆ ಉಪಮಿಸಿ ಬಯ್ಯಲಾಗಿದೆ.

**ನಸ್ರಾಣಿ**[19]

ಒಂದು ಜಾತಿಯ ಮರದಿಂದ ಉತ್ಪತ್ತಿಯಾಗುವ ಅಂಟು ಅಂಟಾದ ಮೇಣಕ್ಕೆ ನಸ್ರಾಣಿ ಎಂದು ಕರೆಯುತ್ತಾರೆ. ಈ ಮೇಣ ನೋಡಲು ಸುಂದರವಾಗಿ ಕಾಣುತ್ತದೆ. ಮುಟ್ಟಿದರೆ ಮೈ ಕೈಗೆಲ್ಲ ಅಂಟಿಕೊಳ್ಳುತ್ತದೆ. ಹೀಗೆ ಎರಡು ಗುಣಗಳಿಂದ ಕೂಡಿದ ನಸ್ರಾಣಿ ಮೇಣವನ್ನು ದ್ವಿಮುಖ ವ್ಯಕ್ತಿತ್ವವುಳ್ಳವರನ್ನು ಶಪಿಸಲು ಬಳಸಿದ್ದಾರೆ.

ಪ್ರಕೃತಿಯೊಂದಿಗೆ ಸರಳವಾದ ಬದುಕನ್ನು ಸಾಗಿಸುವ ಬುಡಕಟ್ಟು ಜನರು ಪರಿಸರವನ್ನು ನೆಚ್ಚಿಕೊಂಡಿದ್ದಾರೆ. ನಿಸರ್ಗದಲ್ಲಿಯ ವಿಸ್ಮಯ, ಚೆಲುವುಗಳನ್ನು ಕಣ್ಣಾರೆ ಕಂಡು ಅನುಭವದ ತೆಕ್ಕೆಯಲ್ಲಿ ನಲಿದು, ಬೆರಗಾಗಿದ್ದಾರೆ. ದತ್ತವಾದ ನೈಸರ್ಗಿಕ ಜ್ಞಾನವನ್ನು ಸಾಹಿತ್ಯ ಮತ್ತು ಸಂಸ್ಕೃತಿಯಲ್ಲಿ ಅಡಕಗೊಳಿಸಿ ತಲೆಮಾರಿನಿಂದ ತಲೆಮಾರಿಗೆ ವರ್ಗಾಯಿಸುತ್ತ ಬರುತ್ತಿದ್ದಾರೆ.

**ಅಡಿ ಟಿಪ್ಪಣಿಗಳು**

1. ಸಿದ್ದೇಗೌಡ (ಸೋಲಿಗ), ಕಾಳಿಕಾಂಬ ಕಾಲೋನಿ, ಚಾಮರಾಜನಗರ ತಾಲ್ಲೂಕು ಮತ್ತು ಜಿಲ್ಲೆ, ವಯಸ್ಸು : 65, ದಿನಾಂಕ 26–01–2021.
2. ಬಸವೇಗೌಡ (ಸೋಲಿಗ), ಕಾಳಿಕಾಂಬ ಕಾಲೋನಿ, ಚಾಮರಾಜನಗರ ತಾಲ್ಲೂಕು ಮತ್ತು ಜಿಲ್ಲೆ, ವಯಸ್ಸು : 70, ದಿನಾಂಕ 10–12–2019.
3. ಹನುಮೇಗೌಡ (ಸೋಲಿಗ), ಮುತ್ತುಗದ ಗದ್ದೆಪೋಡು, ಯಳಂದೂರು ತಾಲ್ಲೂಕು, ಚಾಮರಾಜನಗರ ಜಿಲ್ಲೆ, ವಯಸ್ಸು : 80, ದಿನಾಂಕ 03–05–2017.
4. ಬಸವರಾಜು (ಸೋಲಿಗ), ಯರಕನಗದ್ದೆ ಕಾಲೋನಿ, ಯಳಂದೂರು ತಾಲ್ಲೂಕು, ಚಾಮರಾಜನಗರ ಜಿಲ್ಲೆ, ವಯಸ್ಸು : 45, ದಿನಾಂಕ 06–02–2022
5. ಬಸವರಾಜು (ಸೋಲಿಗ), ಯರಕನಗದ್ದೆ ಕಾಲೋನಿ, ಯಳಂದೂರು ತಾಲ್ಲೂಕು, ಚಾಮರಾಜನಗರ ಜಿಲ್ಲೆ, ವಯಸ್ಸು : 45, ದಿನಾಂಕ 06–02–2022.
6. ಮಾರೆ (ಸೋಲಿಗ), ಭೂತಾಣಿ ಪೋಡು, ಚಾಮರಾಜನಗರ ತಾಲ್ಲೂಕು ಮತ್ತು ಜಿಲ್ಲೆ, ವಯಸ್ಸು:35, ದಿನಾಂಕ 09–11–2020.
7. ಗರಗನ ಮಾದೇಗೌಡ (ಸೋಲಿಗ), ಕಲ್ಲುದೊಡ್ಡಿ, ಚಾಮರಾಜನಗರ ತಾಲ್ಲೂಕು ಮತ್ತು ಜಿಲ್ಲೆ, ವಯಸ್ಸು : 78, ದಿನಾಂಕ 18–02–2022.
8. ಮಂಗಳಮ್ಮ (ಸೋಲಿಗ), ಕಾಳಿಕಾಂಬ ಕಾಲೋನಿ, ಚಾಮರಾಜನಗರ ತಾಲ್ಲೂಕು ಮತ್ತು ಜಿಲ್ಲೆ, ವಯಸ್ಸು : 48, ದಿನಾಂಕ 16–01–2022.
9. ಜಡೇಮಾದಮ್ಮ (ಸೋಲಿಗ), ಮರಟ್ಟಿಪಾಳ್ಯ, ಚಾಮರಾಜನಗರ ತಾಲ್ಲೂಕು ಮತ್ತು ಜಿಲ್ಲೆ, ವಯಸ್ಸು : 65, ದಿನಾಂಕ 11–09–2021.
10. ಬೊಮ್ಮಮ್ಮ (ಸೋಲಿಗ), ಭೂತಾಣಿ ಪೋಡು, ಚಾಮರಾಜನಗರ ತಾಲ್ಲೂಕು ಮತ್ತು ಜಿಲ್ಲೆ, ವಯಸ್ಸು : 60, ದಿನಾಂಕ 10–11–2017
11. ವೀರಮ್ಮ (ಸೋಲಿಗ), ಬೊಮ್ಮನನಂಜನ ಪೋಡು, ಚಾಮರಾಜನಗರ ತಾಲ್ಲೂಕು ಮತ್ತು ಜಿಲ್ಲೆ, ವಯಸ್ಸು : 85 ದಿನಾಂಕ : 05–10–2016.
12. ಬಸವರಾಜು (ಸೋಲಿಗ), ಯರಕನಗದ್ದೆ ಕಾಲೋನಿ, ಯಳಂದೂರು ತಾಲ್ಲೂಕು, ಚಾಮರಾಜನಗರ ಜಿಲ್ಲೆ, ವಯಸ್ಸು : 45, ದಿನಾಂಕ 06–02–2022.
13. ವೀರಮ್ಮ (ಸೋಲಿಗ), ಬೊಮ್ಮನನಂಜನ ಪೋಡು, ಚಾಮರಾಜನಗರ ತಾಲ್ಲೂಕು ಮತ್ತು ಜಿಲ್ಲೆ, ವಯಸ್ಸು : 85 ದಿನಾಂಕ : 05–10–2016.
14. ಚನ್ನಂಜೇಗೌಡ (ಸೋಲಿಗ), ಕಾಳಿಕಾಂಬ ಕಾಲೋನಿ, ಚಾಮರಾಜನಗರ ತಾಲ್ಲೂಕು ಮತ್ತು ಜಿಲ್ಲೆ, ವಯಸ್ಸು : 48, ದಿನಾಂಕ 03–08–2021.
15. ಬೊಮ್ಮಮ್ಮ (ಸೋಲಿಗ), ಭೂತಾಣಿ ಪೋಡು, ಚಾಮರಾಜನಗರ ತಾಲ್ಲೂಕು ಮತ್ತು ಜಿಲ್ಲೆ, ವಯಸ್ಸು : 60, ದಿನಾಂಕ 10–11–2017.
16. ಹನುಮೇಗೌಡ (ಸೋಲಿಗ), ಮುತ್ತುಗದ ಗದ್ದೆಪೋಡು, ಯಳಂದೂರು ತಾಲ್ಲೂಕು, ಚಾಮರಾಜನಗರ ಜಿಲ್ಲೆ, ವಯಸ್ಸು : 80, ದಿನಾಂಕ 03–05–2017.
17. ಜಡೇಮಾದಮ್ಮ (ಸೋಲಿಗ), ಮರಟ್ಟಿಪಾಳ್ಯ, ಚಾಮರಾಜನಗರ ತಾಲ್ಲೂಕು ಮತ್ತು ಜಿಲ್ಲೆ, ವಯಸ್ಸು : 65, ದಿನಾಂಕ 11–09–2021.
18. ಗರಗನ ಮಾದೇಗೌಡ (ಸೋಲಿಗ), ಕಲ್ಲುದೊಡ್ಡಿ, ಚಾಮರಾಜನಗರ ತಾಲ್ಲೂಕು ಮತ್ತು ಜಿಲ್ಲೆ, ವಯಸ್ಸು : 78, ದಿನಾಂಕ 18–02–2022.
19. ವೀರಮ್ಮ (ಸೋಲಿಗ), ಬೊಮ್ಮನನಂಜನ ಪೋಡು, ಚಾಮರಾಜನಗರ ತಾಲ್ಲೂಕು ಮತ್ತು ಜಿಲ್ಲೆ, ವಯಸ್ಸು : 85 ದಿನಾಂಕ : 05–10–2016.

**ಪರಾಮರ್ಶನ ಗ್ರಂಥಗಳು**


1. ಮಹೇಶ್ ಆರ್, ಚಾಮರಾಜನಗರ ಜಿಲ್ಲೆಯ ಬುಡಕಟ್ಟು ಜಾನಪದ, ಅಪ್ರಕಟಿತ ಪಿಎಚ್.ಡಿ. ಮಹಾಪ್ರಬಂಧ, ಮೈಸೂರು ವಿಶ್ವವಿದ್ಯಾನಿಲಯ, 2018
2. ಮಾಗಡಿ ಆರ್. ಗುರುದೇವ, ಕರ್ನಾಟಕದ ಔಷಧೀಯ ಸಸ್ಯಗಳು(ಮಾಲಿಕೆ–3), ದಿವ್ಯಚಂದ್ರಪ್ರಕಾಶನ, ಬೆಂಗಳೂರು, 2014.
3. ವೀರಣ್ಣ ಎಂ. ಡಿ. ಗಿರಿಜನರ ವೈದ್ಯ ಪದ್ಧತಿಗಳು, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, 2016.
4. ಶ್ರೀಪಾದ ಭಟ್, ಕರಾವಳಿಯ ಸಿರಿಯೊಡಲು, ಜೆ.ಎಸ್.ಎಸ್. ಪ್ರಿಟಿಂಗ್ ಪ್ರೆಸ್, ಮೈಸೂರು, 2002.